# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 493 (556)

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಉತ್ತರಿಸುವ ದಿನಾಂಕ : 11.03.2025

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಹೊಸದಾಗಿ ಕೈಗಾರಿಕೆ ಸ್ಥಾಪನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | 2013-14 ರಿಂದ ಇಲ್ಲಿಯವರೆಗೆ ಬೀದರ್ ಜಿಲ್ಲೆಯಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಗಳಲ್ಲಿ ಒಟ್ಟು 13 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರೂ. 950 ಕೋಟಿ ಬಂಡವಾಳ ಹೂಡಿಕೆ ಮತ್ತು 1484 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ.<br>ಇವುಗಳ ಪೈಕಿ 5 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ರೂ. 151 ಕೋಟಿ ಬಂಡವಾಳ ಹೂಡಿಕೆಯಾಗಿದ್ದು ಮತ್ತು 281 ಉದ್ಯೋಗಾವಕಾಶ ಸೃಜನೆಯಾಗಿದೆ. |
| ಆ | ಸರ್ಕಾರ ಹೊಸದಾಗಿ ಕೈಗಾರಿಕೆ ಸ್ಥಾಪನೆ ಮಾಡಿ ಕಲ್ಯಾಣ ಕರ್ನಾಟಕ ನಿರುದ್ಯೋಗ ವಿದ್ಯಾವಂತರಿಗೆ ಉದ್ಯೋಗ ಕಲ್ಪಿಸಲು ಅನುಕೂಲ ಮಾಡಿಕೊಡುವುದೇ; | ಸರ್ಕಾರವು ಯಾವುದೇ ಕೈಗಾರಿಕೆಗಳನ್ನು ನೇರವಾಗಿ ಸ್ಥಾಪಿಸುವುದಿಲ್ಲ. ಆದಾಗ್ಯೂ, ಖಾಸಗಿ ಕೈಗಾರಿಕೆಗಳ ಸ್ಥಾಪನೆಗಾಗಿ ಇಲಾಖೆಯಿಂದ ಅಗತ್ಯ ಬೆಂಬಲ ಸೇವೆಯನ್ನು ನೀಡಲಾಗುತ್ತಿದೆ.<br>ರಾಜ್ಯದಲ್ಲಿ ಕಲ್ಯಾಣ ಕರ್ನಾಟಕ ತಾಲ್ಲೂಕುಗಳನ್ನು ಒಳಗೊಂಡಂತೆ ಕೈಗಾರಿಕಾ ಅಭಿವೃದ್ಧಿಯಲ್ಲಿ ಹಿಂದುಳಿದ ತಾಲ್ಲೂಕುಗಳನ್ನು ಕೈಗಾರಿಕಾ ನೀತಿ 2025-30ರ ವಲಯ-1 ರಡಿ ಪರಿಗಣಿಸಲಾಗಿದೆ. ಈ ವಲಯಕ್ಕೆ ಹೆಚ್ಚುವರಿ ರಿಯಾಯಿತಿ / ಪ್ರೋತ್ಸಾಹಗಳನ್ನು ನೀಡಿ ಸಮತೋಲಿತ ಕೈಗಾರಿಕಾಭಿವೃದ್ಧಿಗೆ ಉದ್ದೇಶಿಸಲಾಗಿದೆ.<br>ಈ ನಿಟ್ಟಿನಲ್ಲಿ ಕೈಗಾರಿಕಾ ನೀತಿ 2025-30, ಏರೊಸ್ಪೇಸ್ ನೀತಿ 2022-27 ಮತ್ತು ಕ್ಲೀನ್ ಮೊಬಿಲಿಟಿ ನೀತಿಗಳನ್ನು ಜಾರಿಗೆ ತರಲಾಗಿದೆ.<br>ಮುಂದುವರೆದಂತೆ, ನಿರುದ್ಯೋಗ ವಿದ್ಯಾವಂತರಿಗೆ ಹೆಚ್ಚಿನ ಉದ್ಯೋಗ ಲಭಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ:-<br>ಕೈಗಾರಿಕಾ ನೀತಿಯನ್ವಯ ಕೈಗಾರಿಕೆಗಳಲ್ಲಿ ಉದ್ಯೋಗ ಸೃಷ್ಟಿಗೆ ಈ ಕೆಳಗಿನಂತೆ ಉದ್ಯೋಗ ಮಾನದಂಡವನ್ನು ವಿಧಿಸಿ, ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕೈಗಾರಿಕೆಗಳಿಗೆ ನೀಡಲಾಗುತ್ತಿದೆ.<br>"ಈ ಕೈಗಾರಿಕೆಗಳಲ್ಲಿ ಒಟ್ಟು ಕನಿಷ್ಠ 70% (ಒಟ್ಟು ಆಧರಿಸಿ) ಉದ್ಯೋಗಾವಕಾಶ ಕನ್ನಡಿಗರಿಗೆ ನೀಡಬೇಕು ಹಾಗೂ ಗ್ರೂಪ್-ಡಿ ಉದ್ಯೋಗಗಳು 100% ಕನ್ನಡಿಗರಿಗೆ ನೀಡಬೇಕು". |
| ಇ | ಈ ಭಾಗದಲ್ಲಿ ಯಾವಾಗ ಕೈಗಾರಿಕೆ ಸ್ಥಾಪನೆ ಪ್ರಾರಂಭಿಸಲಾಗುವುದು? (ಮಾಹಿತಿ ನೀಡುವುದು) | ಸರ್ಕಾರವು ಯಾವುದೇ ಕೈಗಾರಿಕೆಗಳನ್ನು ನೇರವಾಗಿ ಸ್ಥಾಪಿಸುವುದಿಲ್ಲ. ಆದಾಗ್ಯೂ, ಖಾಸಗಿ ಕೈಗಾರಿಕೆಗಳ ಸ್ಥಾಪನೆಗಾಗಿ ಇಲಾಖೆಯಿಂದ ಅಗತ್ಯ ಬೆಂಬಲ ಸೇವೆಯನ್ನು ನೀಡಲಾಗುತ್ತಿದೆ. |

**ಸಿಐ 71 ಎಸ್‌ಪಿಐ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು